**ಕರ್ನಾಟಕ ಸರ್ಕಾರ**

# ಕಾಲೇಜು ಶಿಕ್ಷಣ ಇಲಾಖೆ

ಸಂ: ಕಾಶಿಇ:11:ವರ್ಗಾವಣೆ:2021-22:ವ&ನಿ

ಕಾಲೇಜು & ತಾಂತ್ರಿಕ ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು. ದಿನಾಂಕ:26.07.2021.

## ಅಧಿಸೂಚನೆ

ವಿಷಯ: 2021ನೇ ಸಾಲಿನ ಕಾಲೇಜು ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆ ಪ್ರಕ್ರಿಯೆ ಸಂಬಂಧ ಅಂತಿಮ ಆದ್ಯತಾ ಪಟ್ಟಿ ಪ್ರಕಟಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 151 ಡಿಸಿಇ 2020 ದಿನಾಂಕ:29.01.2021 ರಂತೆ ಅಧಿಸೂಚಿಸಲಾದ ಕಾಲೇಜು ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆ ನಿಯಮಗಳು-2021.
2. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 151 ಡಿಸಿಇ 2020 ದಿನಾಂಕ:29.06.2021.
3. ಈ ಕಛೇರಿ ಸಮ ಸಂಖ್ಯೆಯ ದಿನಾಂಕ:01-07-2021, 08.07.2021 ಮತ್ತು 16-07-2021ರ ಅಧಿಸೂಚನೆ.
4. ಈ ಕಛೇರಿ ಸಮಸಂಖ್ಯೆಯ ದಿನಾಂಕ:21.07.2021ರಂತೆ ಪ್ರಕಟಿಸಲಾದ ತಾತ್ಕಾಲಿಕ ಆದ್ಯತಾ ಪಟ್ಟಿ.

** ** **

ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಬೋಧಕರ (ಪ್ರಾಧ್ಯಾಪಕರು, ಸಹ/ ಸಹಾಯಕ ಪ್ರಾಧ್ಯಾಪಕರು, ಗ್ರಂಥಪಾಲಕರು ಮತ್ತು ಕ್ರೀಡಾ & ದೈಹಿಕ ಶಿಕ್ಷಣ ನಿರ್ದೇಶಕರು) ವರ್ಗಾವಣೆಗಳನ್ನು ನಿಯಂತ್ರಿಸುವ ಸಲುವಾಗಿ ಉಲ್ಲೇಖಿತ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ಕಾಲೇಜು ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆ ನಿಯಂತ್ರಣ) ನಿಯಮಗಳು-2021 ಅನ್ನು ರೂಪಿಸಿ ಅಧಿಸೂಚಿಸಲಾಗಿರುತ್ತದೆ. ಸದರಿ ವರ್ಗಾವಣೆ ನಿಯಮಗಳ ನಿಯಮಗಳನ್ವಯ ಸಾರ್ವಜನಿಕ ಹಿತಾಸಕ್ತಿಯ ವರ್ಗಾವಣೆಗೆ ಒಳಪಡುವ ಬೋಧಕರ (ಪ್ರಾಧ್ಯಾಪಕರು, ಸಹ/ ಸಹಾಯಕ ಪ್ರಾಧ್ಯಾಪಕರು, ಗ್ರಂಥಪಾಲಕರು ಮತ್ತು ಕ್ರೀಡಾ & ದೈಹಿಕ ಶಿಕ್ಷಣ ನಿರ್ದೇಶಕರು) ವಲಯವಾರು ಪಟ್ಟಿಯನ್ನು ಉಲ್ಲೇಖ (3) ರಂತೆ ಪ್ರಕಟಿಸಿ ಆಕ್ಷೇಪಣೆಗಳನ್ನು ಹಾಗೂ ವಿಶೇಷ ಪ್ರಕರಣಗಳ ಕೋರಿಕೆ ವರ್ಗಾವಣೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು.

ನಿಗದಿತ ಕೊನೆಯ ದಿನಾಂಕದೊಳಗೆ ಆನ್‌ಲೈನ್ ಮೂಲಕ ಸ್ವೀಕೃತವಾದ ಆಕ್ಷೇಪಣೆಗಳು ಹಾಗೂ ವಿಶೇಷ ಪ್ರಕರಣಗಳ ಕೋರಿಕೆ ವರ್ಗಾವಣೆ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ಸಾರ್ವಜನಿಕ ಹಿತಾಸಕ್ತಿಯ ವರ್ಗಾವಣೆಗೆ ಒಳಪಡುವ ಬೋಧಕರ ತಾತ್ಕಾಲಿಕ ಆಧ್ಯತಾ ಪಟ್ಟಿ ಹಾಗೂ ವಿಶೇಷ ಪ್ರಕರಣಗಳಡಿ ಕೋರಿಕೆ ವರ್ಗಾವಣೆಗೆ ಅರ್ಹರಿರುವ ಬೋಧಕರ ತಾತ್ಕಾಲಿಕ ಆಧ್ಯತಾ ಪಟ್ಟಿಯನ್ನು ಉಲ್ಲೇಖ(4)ರಂತೆ ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು.

ನಿಗದಿತ ಕೊನೆಯ ದಿನಾಂಕದೊಳಗೆ ಆನ್‌ಲೈನ್ ಮೂಲಕ ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಶೀಲಿಸಿ ಸಾರ್ವಜನಿಕ ಹಿತಾಸಕ್ತಿಯ ವರ್ಗಾವಣೆಗೆ ಒಳಪಡುವ ಬೋಧಕರ ಅಂತಿಮ ಆಧ್ಯತಾ ಪಟ್ಟಿ ಹಾಗೂ ವಿಶೇಷ

ಪ್ರಕರಣಗಳಡಿ ಕೋರಿಕೆ ವರ್ಗಾವಣೆಗೆ ಅರ್ಹರಿರುವ ಬೋಧಕರ ಅಂತಿಮ ಆದ್ಯತಾ ಪಟ್ಟಿಗಳನ್ನು ಈ ಅಧಿಸೂಚನೆಗೆ ಕೆಳಕಂಡಂತೆ ಅನುಬಂಧಿಸಲಾಗಿದೆ.

1. **ಅನುಬಂಧ 1 A-** ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ ವಿಶೇಷ ಪ್ರಕರಣಗಳ ವರ್ಗಾವಣೆಗೆ ಮತ್ತು ಸಾರ್ವಜನಿಕ ಹಿತಾಸಕ್ತಿ ವರ್ಗಾವಣೆಗೆ ಒಳಪಡುವ ಬೋಧಕರ ಆದ್ಯತಾ ಪಟ್ಟಿ
2. **ಅನುಬಂಧ 1 B** - ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ ವಿಶೇಷ ಪ್ರಕರಣಗಳ ವರ್ಗಾವಣೆಯ ಕಾಯ್ದಿರಿಸಿದ ಬೋಧಕರ ಆದ್ಯತಾ ಪಟ್ಟಿ
3. **ಅನುಬಂಧ 2 A** - ಉಳಿಕೆ ಮೂಲವೃಂದದ ವಿಶೇಷ ಪ್ರಕರಣಗಳ ವರ್ಗಾವಣೆಗೆ ಮತ್ತು ಸಾರ್ವಜನಿಕ ಹಿತಾಸಕ್ತಿ ವರ್ಗಾವಣೆಗೆ ಒಳಪಡುವ ಬೋಧಕರ ಆದ್ಯತಾ ಪಟ್ಟಿ
4. **ಅನುಬಂಧ 2 B** - ಉಳಿಕೆ ಮೂಲವೃಂದದ ವಿಶೇಷ ಪ್ರಕರಣಗಳ ವರ್ಗಾವಣೆಯ ಕಾಯ್ದಿರಿಸಿದ ಬೋಧಕರ ಆದ್ಯತಾ ಪಟ್ಟಿ
5. **ಅನುಬಂಧ 3** – ವಿಷಯವಾರು ಖಾಲಿಹುದ್ದೆಗಳ ಮಾಹಿತಿ
6. **ಅನುಬಂಧ 4** – ಕೌನ್ಸಿಲಿಂಗ್ ವೇಳಾಪಟ್ಟಿ

**ಸೂಚನೆಗಳು:**

- ವಿಶೇಷ ಪ್ರಕರಣಗಳಡಿ ಕೋರಿಕೆ ವರ್ಗಾವಣೆಗೆ ಅರ್ಹರಾಗಿರುವ ಬೋಧಕರು ಸುಳ್ಳು/ ತಪ್ಪಾದ ದಾಖಲೆಗಳನ್ನು ಸಲ್ಲಿಸಿರುವುದು ಕಂಡುಬಂದಲ್ಲಿ ಅಂತಹ ಬೋಧಕರ ವರ್ಗಾವಣೆಯನ್ನು ರದ್ದುಪಡಿಸಿ ನಿಯಮಾನುಸಾರ ಇಲಾಖಾ ಶಿಸ್ತುಕ್ರಮ ಜರುಗಿಸಲಾಗುವುದು
- ಕಲ್ಯಾಣ-ಕರ್ನಾಟಕ ವೃಂದ ಮತ್ತು ಉಳಿಕೆ ಮೂಲ ವೃಂದಗಳಿಗೆ ಪ್ರತ್ಯೇಕವಾಗಿ ಆದ್ಯತಾ ಪಟ್ಟಿಯಲ್ಲಿರುವಂತೆ ಕೌನ್ಸಿಲಿಂಗ್ ನಡೆಸಲಾಗುವುದು.
- ವರ್ಗಾವಣೆ ನಿಯಮಗಳನ್ವಯ ಬಿ-ವಲಯದಿಂದ ಕೌನ್ಸಿಲಿಂಗ್ ಅನ್ನು ಪ್ರಾರಂಭಿಸಲಾಗುವುದು. ವಿಶೇಷ ಪ್ರಕರಣಗಳಿಗೆ ಪ್ರತಿ ವಲಯದಲ್ಲಿಯೂ ಎರಡು ಹಂತಗಳಲ್ಲಿ ಕೌನ್ಸಿಲಿಂಗ್ (two rounds of counselling) ಅನ್ನು ನಡೆಸಿ ನಂತರ ಸಾರ್ವಜನಿಕ ಹಿತಾಸಕ್ತಿ ವರ್ಗಾವಣೆಗೆ ಒಳಪಡುವ ಬೋಧಕರಿಗೆ ಕೌನ್ಸಿಲಿಂಗ್ ನಡೆಸಲಾಗುವುದು.
- ವರ್ಗಾವಣೆ ಆದ್ಯತಾಪಟ್ಟಿಯಲ್ಲಿನ ಬೋಧಕರುಗಳೊಂದಿಗೆ Online Counselling ಸಂಬಂಧದ Video Conference Link ಅನ್ನು share ಮಾಡಲಾಗುವುದು ಹಾಗೂ ಇಲಾಖೆಯ Website ನಲ್ಲಿಯೂ ಸಹ ಪ್ರಕಟಿಸಲಾಗುವುದು.
- ಈ ಅಧಿಸೂಚನೆಗೆ ಲಗತ್ತಿಸಿರುವ ಅಂತಿಮ ಆದ್ಯತಾಪಟ್ಟಿಯ ಜೇಷ್ಠತೆಯನ್ವಯ ಕೌನ್ಸಿಲಿಂಗ್‌ಗೆ ಅವಕಾಶ ನೀಡಲಾಗುವುದು. ಸಂಬಂಧಿಸಿದ ಬೋಧಕರು ಕಡ್ಡಾಯವಾಗಿ Online Counselling ನಲ್ಲಿ ಭಾಗವಹಿಸಿ ಪ್ರದರ್ಶಿಸಲಾಗುವ ಹುದ್ದೆಗಳನ್ನು ಆಯ್ಕೆ ಮಾಡಿಕೊಳ್ಳುವುದು.
- ವಿಶೇಷ ಪ್ರಕರಣಗಳ ಕೋರಿಕೆ ವರ್ಗಾವಣೆಗೆ ಹಾಗೂ ಸಾರ್ವಜನಿಕ ಹಿತಾಸಕ್ತಿಯ ಕಡ್ಡಾಯ ವರ್ಗಾವಣೆಗೆ ಆದ್ಯತಾಪಟ್ಟಿಯಲ್ಲಿನ ಬೋಧಕರು ವರ್ಗಾವಣಾ ವೇಳಾಪಟ್ಟಿಯಂತೆ Video Conference ಮೂಲಕ ಭಾಗವಹಿಸುವುದು.
- ಸಾರ್ವಜನಿಕ ಹಿತದೃಷ್ಟಿಯ ವರ್ಗಾವಣೆಗೆ ಒಳಪಡುವ ಬೋಧಕರು ವಿಶೇಷ ಪ್ರಕರಣಗಳ ಕೋರಿಕೆ ವರ್ಗಾವಣೆಯ ಆದ್ಯತಾ ಪಟ್ಟಿಯಲ್ಲಿದ್ದು ಕೌನ್ಸಿಲಿಂಗ್‌ಗೆ ಗೈರುಹಾಜರಾದಲ್ಲಿ ಅಥವಾ Online

Counselling ನಲ್ಲಿ ಭಾಗವಹಿಸಿ ಪ್ರದರ್ಶಿಸಲಾಗುವ ಹುದ್ದೆಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಲು ವಿಫಲರಾದಲ್ಲಿ ಅಂತಹ ಬೋಧಕರನ್ನು ಸಾರ್ವಜನಿಕ ಹಿತದೃಷ್ಟಿಯ ವರ್ಗಾವಣೆಯ ಆದ್ಯತಾಪಟ್ಟಿಯಲ್ಲಿ ಪರಿಗಣಿಸಲಾಗುವುದು.

- ಸಾರ್ವಜನಿಕ ಹಿತದೃಷ್ಟಿಯ ವರ್ಗಾವಣೆಯ ಆದ್ಯತಾಪಟ್ಟಿಯಲ್ಲಿನ ಬೋಧಕರು ಕಡ್ಡಾಯವಾಗಿ Online Counselling ನಲ್ಲಿ ಭಾಗವಹಿಸಿ ಪ್ರದರ್ಶಿಸಲಾಗುವ ಹುದ್ದೆಗಳನ್ನು ಆಯ್ಕೆ ಮಾಡಿಕೊಳ್ಳುವುದು. ಬೋಧಕರು ಕೌನ್ಸಿಲಿಂಗ್‌ಗೆ ಗೈರುಹಾಜರಾದಲ್ಲಿ ಅಥವಾ Online Counselling ನಲ್ಲಿ ಭಾಗವಹಿಸಿ ಪ್ರದರ್ಶಿಸಲಾಗುವ ಹುದ್ದೆಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಲು ವಿಫಲರಾದಲ್ಲಿ ಅಂತಹ ಬೋಧಕರನ್ನು ಸಾರ್ವಜನಿಕ ಹಿತಾಸಕ್ತಿಯ ವರ್ಗಾವಣೆಯ ಕೌನ್ಸಿಲಿಂಗ್ ಪ್ರಕ್ರಿಯೆಯ ನಂತರ ಲಭ್ಯವಿರುವ ಖಾಲಿಹುದ್ದೆಗೆ ಇಲಾಖೆಯಿಂದ ವರ್ಗಾವಣೆ ಮಾಡಲಾಗುವುದು.
- ಸಾರ್ವಜನಿಕ ಹಿತಾಸಕ್ತಿಯ ವರ್ಗಾವಣೆಯ ಆದ್ಯತಾಪಟ್ಟಿಯಲ್ಲಿನ ಬೋಧಕರ ಹುದ್ದೆಗಳನ್ನು ಖಾಲಿಹುದ್ದೆಗಳೆಂದು ಪರಿಗಣಿಸಿ ಕೌನ್ಸಿಲಿಂಗ್ ಸಮಯದಲ್ಲಿ ಪ್ರದರ್ಶಿಸಲಾಗುವುದು.
- ವಿಶೇಷ ಪ್ರಕರಣಗಳಡಿ ವರ್ಗಾವಣೆಗಾಗಿ ಅರ್ಜಿಸಲ್ಲಿಸಿ ಆದ್ಯತಾಪಟ್ಟಿಯಲ್ಲಿರುವ ಬೋಧಕರಿಗೆ ಎರಡು ರೌಂಡ್ ಗಳ ಕೌನ್ಸಿಲಿಂಗ್ ಅವಕಾಶ ಕಲ್ಪಿಸಲಾಗುವುದು
- ಮೊದಲನೆಯ ರೌಂಡ್ ಕೌನ್ಸಿಲಿಂಗ್ ಗೆ ಗೈರುಹಾಜರಾದ ವಿಶೇಷ ಪ್ರಕರಣಗಳ ಬೋಧಕರಿಗೆ ಬದಲಾಗಿ ಕಾಯ್ದಿರಿಸಿದ ಪಟ್ಟಿಯಲ್ಲಿನ ವಿಶೇಷ ಪ್ರಕರಣಗಳ ಬೋಧಕರಿಗೆ ಆಯಾ ವಲಯದ ಗರಿಷ್ಟ ವರ್ಗಾವಣೆ ಮಿತಿಗೆ ಮೀರದಂತೆ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು.
- ಮೊದಲನೆಯ ರೌಂಡ್ ನಲ್ಲಿ ಸ್ಥಳ ಆಯ್ಕೆ ಮಾಡಿಕೊಳ್ಳದ ವಿಶೇಷ ಪ್ರಕರಣಗಳ ಬೋಧಕರಿಗೆ ಎರಡನೇ ರೌಂಡ್ ನಲ್ಲಿ ಸ್ಥಳ ಆಯ್ಕೆಗೆ ಅವಕಾಶ ನೀಡಲಾಗುವುದು. ಎರಡನೇ ರೌಂಡ್ ನಲ್ಲಿಯೂ ಸ್ಥಳ ಆಯ್ಕೆ ಮಾಡಿಕೊಳ್ಳದ ಬೋಧಕರಿಗೆ ಬದಲಾಗಿ ಕಾಯ್ದಿರಿಸಿದ ಪಟ್ಟಿಯಲ್ಲಿನ ವಿಶೇಷ ಪ್ರಕರಣಗಳ ಬೋಧಕರಿಗೆ ಆಯಾ ವಲಯದ ಗರಿಷ್ಟ ವರ್ಗಾವಣೆ ಮಿತಿಗೆ ಮೀರದಂತೆ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು.

**ಆಯುಕ್ತರು**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ**

**ಇವರಿಗೆ**

1. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು ಹಾಗೂ ಬೋಧಕರುಗಳಿಗೆ -ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.

**ಪ್ರತಿಯನ್ನು**

1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಹಾಗೂ ಕಲಬುರಗಿ-ಮಾಹಿತಿಗಾಗಿ.
2. ರಕ್ಷಾ ಕಡತ
3. ಕಛೇರಿ ಪ್ರತಿ.